# ಬಿ.ಟಿ. ಲಲಿತಾ ನಾಯಕ್ ಮತ್ತು ಗೀತಾ ನಾಗಭೂಷಣರವರ ಕಥಾ ಸಾಹಿತ್ಯದಲ್ಲಿ ಸಾಮಾಜಿಕ ಚಿಂತನೆ

ಪ್ರಮೀಳಾ

ಸಹ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಕನ್ನಡ ವಿಭಾಗ, ಸೆಂಟ್ ಆನ್ಸ್ ಮಹಿಳಾ ಪದವಿ ಕಾಲೇಜು, ಬೆಂಗಳೂರು.

DOI: https://doi.org/10.5281/zenodo.18775316

## ABSTRACT:

ಸಾಹಿತ್ಯ ಪ್ರಕಾರಗಳಲ್ಲಿ ಸಣ್ಣಕಥೆಗೆ ಒಂದು ಸೂಕ್ಷ್ಮತೆ ಇದೆ. ಕಥೆ ಹೇಳುವ, ಕೇಳುವ ಪ್ರಕ್ರಿಯೆ ಯಾವಾಗ ಪ್ರಾರಂಭವಾಯಿತು ಎಂಬುದನ್ನು ಖಚಿತವಾಗಿ ಹೇಳಲಾಗದು. ಸಾಹಿತ್ಯದ ಯಾವುದೇ ಪ್ರಕಾರವನ್ನು ತೆಗೆದುಕೊಂಡಾಗ, ಅದರ ಸಾರಾಂಶ ಏನು? ಕಥೆ ಏನು? ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಈ ಹಿನ್ನೆಲೆಯಲ್ಲಿ ಕಥೆಗೆ ತನ್ನದೇ ಆದ ಮಹತ್ವದ ಸ್ಥಾನವಿದೆ. ಆಧುನಿಕ ಸಣ್ಣ ಕಥೆಯ ಇತಿಹಾಸ ನೂರು ವರ್ಷದಷ್ಟಿದೆ. ದಲಿತ ಕಥಾಸಾಹಿತ್ಯದ ಹೆಗ್ಗಳಿಕೆ ಏನೆಂದರೆ ಅವರು ಬರವಣಿಗೆಗಳ ಮೂಲಕ ದಲಿತ ಸಮುದಾಯದಲ್ಲಿ ಆತ್ಮವಿಶ್ವಾಸವನ್ನು ಹುಟ್ಟಿಸಿದರು. ದಲಿತರ ನೋವು-ನಲಿವನ್ನು ವಿವರಿಸಿದರು. ದಲಿತ ಕಥೆಗಾರರು ದಲಿತ ಸಂವೇದನೆಯ ಮೂಲಕ, ಬದುಕನ್ನು ನೋಡುತ್ತಾ ಒಂದು ಕಲಾ ಮಾಧ್ಯಮಕ್ಕೆ ಹೊಸ ಆಯಾಮವನ್ನು ನೀಡಿದರು.

ಗೀತಾ ನಾಗಭೂಷಣ ಮತ್ತು ಬಿ.ಟಿ. ಲಲಿತಾ ನಾಯಕ್‌ರವರ ಕಥಾ ಸಾಹಿತ್ಯದಲ್ಲಿ ಸಾಮಾಜಿಕ ಚಿಂತನೆ ಬಗ್ಗೆ ಒಂದು ಭಿನ್ನವಾದ ನೋಟವಿದೆ. ಅದು ಹೇಗೆ? ಯಾವ ಸ್ವರೂಪದ್ದು? ಎಂದು ತಿಳಿಯಬೇಕಾದದ್ದು ಮಹತ್ವದ ವಿಚಾರ. ನಮ್ಮ ಪುರುಷಪ್ರಧಾನ ಸಮಾಜದ ಚಿಂತನೆಗಳು ಹೆಣ್ಣಿನ ಅಸ್ಮಿತೆಯನ್ನು ದಾಖಲಿಸದೆ ಹೋಗಿವೆ. ಸಂಸ್ಕೃತಿಯ ಇತಿಹಾಸದಲ್ಲಿ ಹೆಣ್ಣಿನ ಈ ಗೈರುಹಾಜರಿ ಅತ್ಯಂತ ಮುಖ್ಯವಾದ ಪ್ರಶ್ನೆಗಳನ್ನು ಎತ್ತುತ್ತದೆ. ಸಮಾಜದಲ್ಲಿ ಆಕೆಯ ಸಂಬಂಧದ ಕುರಿತು ನೋಡಬೇಕಾಗಿದೆ. ಈ ಬದುಕಿನ ಕ್ರೌರ್ಯದ ಬಗ್ಗೆ, ಹಿಂಸೆಯ ಬಗ್ಗೆ, ತಳ ಸಮುದಾಯದ ಸಾಮಾಜಿಕ ಚಿತ್ರಣದ ಬಗ್ಗೆ, ಪುರುಷ ಪ್ರಧಾನ ವ್ಯವಸ್ಥೆ ಹುಟ್ಟು ಹಾಕಿರುವ ಹೆಂಗಸರ ಶೋಷಣೆಯ ಬಗ್ಗೆ, ರೀತಿ ರಿವಾಜುಗಳ ಬಗ್ಗೆ, ಪುರುಷ ಸಮುದಾಯದ ಹುನ್ನಾರಗಳ ಬಗ್ಗೆ, ಮತಾಂತರ ಮತ್ತು ಮತಾಂತರಗೊಂಡವರ ಮನಸ್ಸಿನ ಬೇಗುದಿಗಳನ್ನು ವಿವರಿಸುವ ಚಿತ್ರಣ ಹಾಗೂ ಧರ್ಮದ ಚಿತ್ರಣದ ಬಗ್ಗೆ ತಮ್ಮ ಕಥೆಗಳಲ್ಲಿ ವಿವರಿಸುತ್ತಾರೆ. 80ರ ದಶಕಗಳ ನಂತರದಿಂದ ಹೆಣ್ಣು ಮಕ್ಕಳು ಎದುರಿಸುವ ಸಮಸ್ಯೆ ಮತ್ತು ಸವಾಲುಗಳನ್ನು ವಿವರಿಸುತ್ತಾ, ಹೆಣ್ಣುಮಕ್ಕಳ ನೋವಿಗೆ ಧ್ವನಿಯಾಗುತ್ತಾ ಸಮಾಜದ ವ್ಯವಸ್ಥೆಗೆ, ಸನಾತನವಾದಿಗಳಿಗೆ ಸವಾಲನ್ನು ಹಾಕುತ್ತಾ ಗೀತಾ ನಾಗಭೂಷಣ ಮತ್ತು ಬಿ.ಟಿ. ಲಲಿತಾ ನಾಯಕ್‌ರವರು ಬರೆಯತೊಡಗಿದರು.

ಹೀಗಾಗಿ ಗೀತಾ ನಾಗಭೂಷಣ ಮತ್ತು ಬಿ.ಟಿ. ಲಲಿತಾ ನಾಯಕ್‌ರವರ ಕಥಾ ಸಾಹಿತ್ಯದಲ್ಲಿನ ಸಾಮಾಜಿಕ ಸಂಬಂಧದ ಸ್ವರೂಪದ ಅಧ್ಯಯನವನ್ನು ಮಾಡಬೇಕಾದ ಪ್ರಸ್ತುತತೆ ಇರುವುದರಿಂದ, ಅವರ ಕೆಲವು ಕಥೆಗಳನ್ನು ಗಮನಿಸಿ

ಅವುಗಳನ್ನು ವಿಶ್ಲೇಷಣಾತ್ಮಕ ವಿಧಾನದಿಂದ ನೋಡುವುದೇ ಈ ಪ್ರಬಂಧದ ಮುಖ್ಯ ಗುರಿ ಹಾಗೂ ಉದ್ದೇಶವಾಗಿದೆ.

**KEYWORDS:**

ದಲಿತ ಸಾಹಿತ್ಯ, ಸಾಮಾಜಿಕ ಚಿಂತನೆ, ಮಹಿಳಾ ಸಂವೇದನೆ, ಬಿ.ಟಿ. ಲಲಿತಾ ನಾಯಕ್, ಗೀತಾ ನಾಗಭೂಷಣ.

**ಪೀಠಿಕೆ:**

ಆಧುನಿಕ ಕಾಲಘಟ್ಟದಲ್ಲಿ ಕೋಟ್ಯಾಂತರ ಸಣ್ಣಕಥೆಗಳು ಬಂದಿವೆ. ಅವುಗಳ ತಂತ್ರ ವಿನ್ಯಾಸವನ್ನು ಗಮನಿಸಿದರೆ ದಲಿತ ಕಥಾಸಾಹಿತ್ಯ ಭಿನ್ನವಾಗಿದೆ. ಅಲ್ಲದೆ ಕನ್ನಡದ ಸಾಂಸ್ಕೃತಿಕ ಪರಿಸರಕ್ಕೆ ಒಂದು ಹೊಸ ಸಂವೇದನೆ ಮತ್ತು ಹೊಸ ವಸ್ತುವನ್ನು ಕೊಟ್ಟ ಖ್ಯಾತಿ ಇದಕ್ಕಿರುತ್ತದೆ.

ದಲಿತ ಸಾಹಿತ್ಯ ಪ್ರಕಾರದ ವಿಶಿಷ್ಟತೆಯನ್ನು ಗಮನಿಸಿದರೆ, ಈ ಪ್ರಕಾರ ಮುಖ್ಯ ವಾಹಿನಿಯಲ್ಲಿ ಇಲ್ಲದ ನಿರ್ಲಕ್ಷಿತ ಸಾಮುದಾಯಿಕ ಚಿತ್ರಣವನ್ನು ದಾಖಲಿಸುತ್ತದೆ. ದಲಿತ ಸಾಹಿತ್ಯವು ತನಗಿಂತ ಹಿಂದೆ ಬಂದ ನವೋದಯ, ನವ್ಯಸಾಹಿತ್ಯದ ಮಿತಿಗಳನ್ನು ಪ್ರಶ್ನಿಸಿ, ವಿಮರ್ಶಿಸುವ ಕೆಲಸವನ್ನು ಮಾಡಿತು. ಎಡಪಂಥೀಯ ಒಲವು, ಶೋಷಿತರ ಪರವಾದ ಹೋರಾಟ, ಅಸ್ಪೃಶ್ಯತೆ, ಜಾತಿಪದ್ಧತಿ ಮತ್ತು ಲಿಂಗತಾರತಮ್ಯಗಳ ವಿರುದ್ಧ ಧ್ವನಿ ಎತ್ತುವ ಕೆಲಸವನ್ನು ದಲಿತ ಸಾಹಿತ್ಯ ಮಾಡಿತು. ಅಲ್ಲದೆ ಸಮಾನತೆಯ ಸಮಾಜವನ್ನು ಕಟ್ಟುವ ಕನಸನ್ನು ಕಾಣತೊಡಗಿತ್ತು. ಹೀಗೆ ತನ್ನದೇ ಆದ ತತ್ವ ಮತ್ತು ಮೌಲ್ಯಗಳನ್ನು ಮುಂದಿಡುವ ದಲಿತ ಕಥನಗಳು ಸಂಶೋಧನೆಗೆ ಆಹ್ವಾನವನ್ನು ನೀಡುತ್ತವೆ. ದಲಿತ ಕಥೆಗಳಲ್ಲಿ ಬಿ.ಟಿ. ಲಲಿತಾ ನಾಯಕ್ ಮತ್ತು ಗೀತಾ ನಾಗಭೂಷಣ ಅವರ ಸಾಹಿತ್ಯ ಮುಖ್ಯವಾಗಿದೆ.

ಕನ್ನಡ ಸಾಹಿತ್ಯದಲ್ಲಿ ನವ ನಿರ್ಮಾಣದ ರೂಪವಾಗಿ ದಲಿತ ಸಾಹಿತ್ಯ ಸೃಷ್ಟಿಯಾಗಿ, ಆರಂಭದಲ್ಲಿ ಸಾಕಷ್ಟು ಪ್ರಚಾರವನ್ನು ಪಡೆಯಿತು. ಇಂತಹ ಹೊಸ ಪ್ರವಾಹದಲ್ಲಿ ಕಂಡು ಬಂದ ಲೇಖಕಿಯರಲ್ಲಿ ಬಿ.ಟಿ. ಲಲಿತಾ ನಾಯಕ್ ಮತ್ತು ಗೀತಾ ನಾಗಭೂಷಣ ಪ್ರಮುಖರು. ದಲಿತ ಬಂಡಾಯ ಲೇಖಕಿಯೆಂದೇ ಗುರುತಿಸಲ್ಪಟ್ಟಿರುವ ಇವರು ಗಿರಿಜನ ಸಂಸ್ಕೃತಿಯಿಂದ ಅರಳಿ ಬಂದವರಾಗಿದ್ದಾರೆ. ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃಷಿ ಮಾಡಿರುವ ಲಲಿತಾ ನಾಯಕ್ ಅವರು ವೃತ್ತಿಯಲ್ಲಿ ರಾಜಕಾರಣಿಯಾದರೂ, ಪ್ರವೃತ್ತಿಯಲ್ಲಿ ಶ್ರೇಷ್ಠ ಬರಹಗಾರರೆಂದೇ ಪ್ರಸಿದ್ಧರು. ಇವರ ಬರಹ ಸಾಹಿತ್ಯಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಮುಖ್ಯವಾಗುತ್ತದೆ.

ಬಿ.ಟಿ. ಲಲಿತಾ ನಾಯಕ್ ಅವರು 'ನೆಲೆ-ಬೆಲೆ' ಹಾಗೂ 'ಗತಿ'ಯಂತಹ ಕಾದಂಬರಿಗಳನ್ನು, 'ಹಬ್ಬ ಮತ್ತು ಬಲಿ', 'ಭಟ್ಟನ ಕನಸು' ಎಂಬ ಸಣ್ಣ ಕಥಾ ಸಂಕಲನಗಳನ್ನು ಬರೆದಿರುವುದರೊಂದಿಗೆ 'ನಂರೂಪ್ಲಿ', 'ಇದೇ ಕೂಗು ಮತ್ತೆ ಮತ್ತೆ'

ಎಂಬ ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ಬಾಲಾಜಿ ತಾಂಡಾದ ಬಿ.ಟಿ. ಲಲಿತಾ ನಾಯಕ್ ಅವರು ಕಥೆ, ಕಾವ್ಯ, ಕಾದಂಬರಿ, ಆತ್ಮಕಥೆ ಮೊದಲಾದ ಕೃತಿಗಳನ್ನು ಬರೆದುದು ಅಲ್ಲದೆ ಸದಾ ಸಮಾಜ ಸೇವಕಿಯಾಗಿದ್ದು, ಶಾಸಕರಾಗಿ, ಸಚಿವರಾಗಿ ಹಲವಾರು ಮಹತ್ವದ ಕೆಲಸ ಮಾಡಿದ್ದು ಸಹ ಹೆಮ್ಮೆಯ ವಿಚಾರ.

ಬಿ.ಟಿ. ಲಲಿತಾ ನಾಯಕ್ ಅವರು ಗಿರಿಯಲ್ಲಿ ಬದುಕುವ ತಮ್ಮ ಜನರ ಪಟ್ಟ ಪಾಡು, ನೋವು, ನಿರಾಸೆ, ಸಾವು, ಸಂಕಟಗಳನ್ನು ವಿವರವಾಗಿ ಚಿತ್ರಿಸಿದ್ದಾರೆ. ಅಲ್ಲಿ ಬಾಳಿ ಬದುಕಿರುವವರಿಗೆ ಆ ನೋವು ಸಾವು ಗೊತ್ತಾಗುವುದು. ಊರಿನಲ್ಲಿರುವ ನಮ್ಮಂಥವರಿಗೆ ಅದು ಗೊತ್ತಾಗುವುದು ಕಷ್ಟ. ಪುರುಷೋತ್ತಮ ಬಿಳಿಮಲೆಯವರು ಲಲಿತಾ ನಾಯಕರ ಕೃತಿಯ ಕುರಿತು ಹೇಳಿದ ಮಾತುಗಳು ಗಮನಾರ್ಹವಾಗಿವೆ. ಗ್ರಾಮೀಣ ಪ್ರದೇಶದ ಜನರ ಮೂಢನಂಬಿಕೆ, ಸಂಪ್ರದಾಯ, ಸಣ್ಣತನ, ಲೈಂಗಿಕ ಸಂಬಂಧಗಳು, ಸಾರಾಯಿ ಮುಂತಾದ ದಲಿತ ಸಮೂಹದ ದೌರ್ಬಲ್ಯಗಳನ್ನು ಇಲ್ಲಿ ವೈಭವೀಕರಿಸಲಾಗಿದೆ. ಪಕ್ಷಪಾತತನವನ್ನುಳ್ಳ ನ್ಯಾಯ ಪಂಚಾಯಿತಿಕಟ್ಟೆ, ನಿರಪರಾಧಿಗಳಿಗೆ ದಂಡ ವಿಧಿಸುವ ರೀತಿ, ಮಾನವ ನಿರ್ಮಿತ ಮೌಢ್ಯಗಳನ್ನು ಬಂಡವಾಳವಾಗಿಸಿಕೊಂಡಿರುವ ಸಮಾಜ... ಮೊದಲಾದ ವಿವರಗಳನ್ನು ಒಳಗೊಂಡಿರುವುದನ್ನು ಕಾಣಬಹುದು.

“ಮಹಿಳೆಯರ ಕುರಿತಾದ ನೋವು, ದುಃಖ ದುಮ್ಮಾನಗಳನ್ನು ಗ್ರಹಿಸುವಲ್ಲಿ ಲಲಿತಾ ನಾಯಕ್ ಅವರ ಕೃತಿಗಳು ಕೆಲಸ ಮಾಡಿವೆ. ತಮ್ಮ ಸಮಾಜದಲ್ಲಿ ಇರುವ ಸಮಸ್ಯೆಗಳನ್ನು ಗುರುತಿಸಿ, ಅದನ್ನು ತಮ್ಮ ಬರವಣಿಗೆಗೆ ಆಯ್ಕೆ ಮಾಡಿಕೊಂಡರು. ಈ ಕಾರಣದಿಂದ ಅವರ ಬರವಣಿಗೆ ಪಕ್ವವಾಯಿತು. ಪ್ರತಿಯೊಬ್ಬರ ಬದುಕು ಯಶಸ್ವಿಯಾಗಬೇಕೆಂದು ಹೋರಾಟ ಮಾಡಿದ ಅವರ ಮನಸ್ಸನ್ನು ಕಾಣಬಹುದು. ಲಂಬಾಣಿ ಸಂಪ್ರದಾಯ ಬದ್ಧ ಸಮಾಜದಲ್ಲಿ ಒಳಗೇ ಅಂತರ್ಗತವಾಗಿರುವ ಹೆಣ್ಣಿನ ಶೋಷಣೆ, ಗಂಡಿನ ದಬ್ಬಾಳಿಕೆ, ಅಲ್ಲಿನ ಬಡತನ, ನಿರಾಶಾದಾಯಕ ಬದುಕು ಹಾಗೂ ಮುಕ್ತತೆಯ ಕಡೆಗೆ ಹೆಣ್ಣಿನ ತುಡಿತ – ಇವುಗಳನ್ನು ಲಲಿತಾ ನಾಯಕ್ ಅವರು ಸಮಷ್ಟಿ ನೆಲೆಯಲ್ಲೇ ತಮ್ಮ ವೈಯಕ್ತಿಕ ಬಯಕೆ, ನೋವುಗಳನ್ನು ಹಂಚಿಕೊಳ್ಳುತ್ತಾರೆ. ಇಂತಹ ಮಹಿಳಾ ಪರ ಚಿಂತನೆಗಳಿರುವುದನ್ನು ಕಾಣುತ್ತೇವೆ.”

ಸಾಂಪ್ರದಾಯಿಕ ಆವರಣದೊಳಗೆ ಚಿಂತಿಸುತ್ತಿರುವ ಸ್ತ್ರೀ ತನ್ನ ನೆಲೆಯನ್ನು ಗುರುತಿಸಿಕೊಳ್ಳುವುದು ಸುಲಭದ ಕೆಲಸವಲ್ಲ. ಮಹಿಳೆ ಸ್ವಾಭಿಮಾನದಿಂದ ಬದುಕಬೇಕೆಂದೂ ಪ್ರಯತ್ನಿಸಿದರೂ ವ್ಯವಸ್ಥೆ ಅವಳನ್ನು ಹಾಗೆ ಬಿಡುವುದಿಲ್ಲ. ಈ ಸಂಕಲನದ ಮೊದಲ ಕಥೆಯಾದ ‘ಲೂಟಿ’ ಇದೇ ಆಶಯವನ್ನು ಒಳಗೊಂಡಿದೆ. ಲೂಟಿ ಕಥೆಯಲ್ಲಿನ ರಾಮಿ ಗಂಡ ಮತ್ತು ಮಕ್ಕಳನ್ನು ಪಡೆದಿದ್ದಾಳೆ. ಗಂಡ ರೋಗ ಪೀಡಿತನಾದಾಗ ಮನೆತನದ ಜವಾಬ್ದಾರಿ ಇವಳದಾಗುತ್ತದೆ. ತನ್ನ ನೋವನ್ನೆಲ್ಲ ರಾಮಿ ಅದುಮಿಟ್ಟುಕೊಂಡು ಬದುಕುತ್ತಿದ್ದರೂ, ವ್ಯವಸ್ಥೆ ಅವಳನ್ನು ದುರಂತಕ್ಕೆ ತಳ್ಳುತ್ತದೆ.

ತಾನು ಒಂದೇ ದಾರಿಯಲ್ಲಿ ಸಾಗಬೇಕೆಂದು ಬಯಸಿದರೂ ಅವಳ ದಾರಿ ಕವಲಾಗುತ್ತದೆ. ಸ್ವಾಭಿಮಾನದಿಂದ ಬದುಕಬೇಕೆಂದುಕೊಂಡಿದ್ದ ರಾಮಿಯ ಮಾನ, ಆಭರಣ ಮತ್ತು ಉತ್ಪಾದನಾ ಸಾಧನವಾದ ಕೊಡಲಿ ಇಲ್ಲವಾದಾಗ ರೋಷ ಉಕ್ಕಿ ಬರುತ್ತದೆ. ಆದರೆ ಎಲ್ಲವೂ ಅವಳಿಂದ ಲೂಟಿಯಾಗಿದ್ದರಿಂದ ಅವಳಲ್ಲಿ ಮೂಡುವ ರೋಷವು ಸಹಜವಾಗಿದ್ದರೂ ಅದು ಮುಗಿದು ಹೋದ ಕತೆಯಾಯಿತು.

ಯಾಜಮಾನ್ಯ ನಿಲುವು ಯಾವ ರೀತಿ ಇದೆ ಎಂಬುದನ್ನು 'ಕಳ್ರು' ಕಥೆಯಲ್ಲಿ ನಾವು ಕಾಣಬಹುದಾಗಿದೆ. "ಬಡತನ ಮತ್ತು ಹಸಿವು ಮಾನವನನ್ನು ಮತ್ತು ಬದುಕನ್ನು ಕಿತ್ತು ತಿನ್ನುವ ರಾಕ್ಷಸನಿದ್ದಂತೆ ಎಂಬುದು ಕಳ್ರು ಕಥೆಯ ಆಶಯವಾಗಿದೆ. ಬಡತನ ವ್ಯಕ್ತಿತ್ವದ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತದೆ. ಹಸಿವು ಎಂತಹ ಹೇಯ ಕೃತ್ಯವನ್ನು ಬೇಕಾದರೂ ಮಾಡಿಸಬಹುದು. ಆದ್ದರಿಂದಲೇ 'ಕಳ್ರು' ಕಥೆಯ ಪಾಪಿ ಹಸಿವನ್ನು ತಾಳಲಾರದೆ ಪರಿತಪಿಸುವ ತನ್ನ ಕುಟುಂಬದ ಇಂಗಿತವನ್ನು ಕಡಿಮೆ ಮಾಡಲು ತಾನು ಕೆಲಸ ಮಾಡುವ ಯಜಮಾನನ ಮನೆಯಿಂದ ತಂಗಳು ಸಾರನ್ನೂ ಕದ್ದು ತರುತ್ತಾನೆ. ಆದರೆ ತಾವು ಬಾಡೂಟ ಮಾಡಿ, ಬಡವರಿಗೆ ತಂಗಳು ಸಾರೂ ಕೊಡದೆ ಇರುವುದು, ಕದ್ದಾಗ ಅವರಿಗೆ ಕಳ್ಳತನ ಮಾಡಿದ್ದಕ್ಕೆ ಚಿತ್ರಹಿಂಸೆ ಕೊಡುವುದು ಶ್ರೀಮಂತರ ಸಣ್ಣತನವನ್ನು ಎತ್ತಿ ತೋರಿಸುತ್ತದೆ." ಒಟ್ಟಾರೆಯಾಗಿ ಇಲ್ಲಿ ಉಳ್ಳವರ ಮತ್ತು ಬಡವರ ನಡುವಿನ ಅಂತರವನ್ನು ಎತ್ತಿ ತೋರಿಸುತ್ತದೆ. ಶ್ರೀಮಂತರು ಕಳ್ಳತನ ಮಾಡಿದರೂ ಅದು ದೊಡ್ಡ ಸಂಗತಿಯಾಗದೆ, ಅದೇ ಬಡವ ಸಣ್ಣ ವಸ್ತು ಕದ್ದರೂ ಅದು ದೊಡ್ಡ ವಿಚಾರವಾಗುತ್ತದೆ. ಬಡವರ ಸ್ವಾಭಿಮಾನವು ಉಳ್ಳವರಿಗಿಂತ ದೊಡ್ಡದು ಎಂಬುದು ಈ ಕಥೆಯ ಆಶಯವಾಗಿದೆ.

'ತಾಯಿ ಸಾಕಿಬಾಯಿ' ಕಥೆಯಲ್ಲಿ ವಿಧವೆ ಸಾಕಿಬಾಯಿ ಮಗನ ಅಂತರ್ಜಾತಿ ಮದುವೆಯಿಂದಾಗಿ ಆತನಿಂದ ಸುಖ ಕಾಣದೆ ಮುನಿಯನನ್ನು ಪ್ರೀತಿಸುತ್ತಾಳೆ. ಆದರೆ ತನ್ನ ತಾಯಿಯ ಜೊತೆ ಆಕೆಯ ಪ್ರಿಯಕರ ಮುನಿಯನನ್ನು ನೋಡಿದರೂ, ಆಕೆಯ ಮಗ ಒಪ್ಪದೆ ನಿರಾಕರಿಸುತ್ತಾನೆ. ಅಲ್ಲದೆ ಸಮಾಜದ ಕೆಂಗಣ್ಣಿಗೂ ಗುರಿಯಾಗುತ್ತಾಳೆ. ಹೀಗಾಗಿ ಸಾಕಿಬಾಯಿ ಜೀವನದುದ್ದಕ್ಕೂ ಎಲ್ಲೂ ಸುಖ ಕಾಣದೆ ಕೊನೆಗೆ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಇದೊಂದು ಸಾಮಾಜಿಕ ದುರಂತವಾಗಿದೆ.

'ಉಪಚಾರ' ಕಥೆಯಲ್ಲಿ ಅಸಹಾಯಕ ಮುದುಕಿಯೊಬ್ಬಳನ್ನು ಅವಳ ಮೈಮೇಲಿನ ಒಡವೆಗಳಿಗೋಸ್ಕರ ಮಗ, ಸೊಸೆ ಹಾಗೂ ಮೊಮ್ಮಕ್ಕಳು ಉಪಚಾರ ಮಾಡುತ್ತಾರೆ. ಆದರೆ ಅಜ್ಜಿ ಆ ಮೊಮ್ಮಕ್ಕಳ ಉಪಚಾರದ ಸತ್ಯಾಸತ್ಯತೆಯನ್ನು ತಿಳಿದು, ನನ್ನ ಕೈಯಲ್ಲಿನ ಬೆಳ್ಳಿ ಕಡಗಕ್ಕೆ ಇಷ್ಟೊಂದು ಆತಿಥ್ಯವೇ ಎಂದು ನಿಜಾಂಶ ತಿಳಿದುಕೊಳ್ಳುತ್ತಾಳೆ. ಸ್ವಾರ್ಥ ಮನೆಮಾಡಿರುವುದನ್ನು ಕಾಣಬಹುದು. 'ಗಾಂಧಿ ಗುಂಡು ಸಾವು ಇತ್ಯಾದಿ' ಕಥೆಯಲ್ಲಿ ತೊಳಜನಂತಹ ವ್ಯಕ್ತಿಯ ಕನಸು ನನಸಾಗದೆ ಭಗ್ನಗೊಳ್ಳುವ ಪರಿಯನ್ನು ಚಿತ್ರಿಸುತ್ತದೆ. ಕಷ್ಟಪಟ್ಟು ಓದಿಸಿದ ಮಗನಿಗೆ ನೌಕರಿ ಸಿಕ್ಕ ಮೇಲೆ ಅವನಿಂದ ಸುಖ ಪಡೆಯಬೇಕೆಂಬ ಹಂಬಲದಲ್ಲಿದ್ದ ತೊಳಜನ ಆಸೆ

ಕ್ಷಣಾರ್ಧದಲ್ಲೇ ಕಮರಿಹೋಗುತ್ತದೆ. ಮಗನ ವಿದ್ಯಾಭ್ಯಾಸಕ್ಕೋಸ್ಕರ ಬದುಕನ್ನೇ ಸವೆಸಿಕೊಂಡಿದ್ದ ತೊಳಜನಿಗೆ, ಮಗ ರಾಮ ವಿದ್ಯಾವಂತನಾಗಿ ನೌಕರಿ ಹಿಡಿದು ಅಂತರ್ಜಾತಿ ವಿವಾಹವಾಗುತ್ತಾನೆ. ಮಗನ ಇಂತಹ ಸ್ವಾರ್ಥದ ನಿಲುವು ತಂದೆಗೆ ಸಾಕಷ್ಟು ನೋವನ್ನು ಕೊಡುತ್ತದೆ.

'ಕೊಲೆ' ಕಥೆ ಅನ್ಯಾಯಕ್ಕೊಳಗಾದ ಕುಟುಂಬಕ್ಕೆ ನ್ಯಾಯ ಸಿಗದಿದ್ದಾಗ ಆಕ್ರೋಶಗೊಳ್ಳುವ ವಿವರವನ್ನು ನೋಡಬಹುದು. ದೇವಿಯ ತಂದೆ ಕಾರ್ಖಾನೆಯಲ್ಲಿ ದುಡಿಯುತ್ತಿದ್ದಾಗ ಅಪಘಾತಕ್ಕೀಡಾಗಿ ಕಾಲು ಕಳೆದುಕೊಳ್ಳುತ್ತಾನೆ. ಹೀಗೆ ಅಂಗವಿಕಲನಾದ ಮೇಲೆ ಜೀವನ ಸಾಗಿಸಲು ಕಿರಾಣಿ ಅಂಗಡಿಯನ್ನು ಇಡುತ್ತಾನೆ. ಇದರಿಂದ ಪಕ್ಕದ ಅಂಗಡಿಯ ಜಾಲದ ಶೆಟ್ಟಿಗೆ ತೊಂದರೆಯಾಯಿತು ಎಂದು ಶೆಟ್ಟಿ ಆತನನ್ನು ಕೊಲೆ ಮಾಡುತ್ತಾನೆ. ಇದೆಲ್ಲವನ್ನು ಕಣ್ಣಾರೆ ಕಂಡಿದ್ದ ಅಪ್ರಾಪ್ತ ವಯಸ್ಸಿನ ದೇವಿ ಪೊಲೀಸರಿಂದ ನ್ಯಾಯ ಸಿಗದೆ ಇದ್ದಾಗ ಅಸಹಾಯಕಳಾಗುತ್ತಾಳೆ. ಕಾನೂನು ಅನ್ನುವುದು ಉಳ್ಳವರ ಸೊತ್ತಾಗಿ ಇರುವುದು ಕಂಡುಬರುತ್ತದೆ. ನಂತರ ಸೇಡಿಗೆ ಪ್ರತಿಸೇಡು ಎಂದು ಆಕೆ ಜಾಲಶೆಟ್ಟಿಯನ್ನು ಕೊಲೆ ಮಾಡಿದರೂ, ಕಾನೂನಿನಿಂದ ಆಕೆ ತಪ್ಪಿಸಿಕೊಳ್ಳಲಾಗುವುದಿಲ್ಲ. ಬಡವನ ಕೋಪ ದವಡೆಗೆ ಮೂಲ ಎನ್ನುವಂತೆ ಆಕೆ ಶಿಕ್ಷೆಯನ್ನು ಅನುಭವಿಸಬೇಕಾಯಿತು.

'ಸುದ್ದಿ' ಕಥೆಯಲ್ಲಿ, ವಯಸ್ಸಿಗೆ ಬಂದ ಹೆಣ್ಣು ಮಗಳನ್ನು ತನ್ನ ಮನೆಯಲ್ಲೇ ಇಟ್ಟುಕೊಂಡು ಅವರಿವರ ಮನೆಯ ಹೆಣ್ಣು ಮಕ್ಕಳ ಸುದ್ದಿಯನ್ನು ಕುರಿತು ಮಾತಾಡುವ ರಾಜಿಯ ತಾಯಿಗೆ ತನ್ನ ಮಗಳೇ ಬೇರೊಬ್ಬನೊಂದಿಗೆ ಓಡಿಹೋದ ಸುದ್ದಿ ಕೇಳಿ ದಿಗ್ಭ್ರಮೆಯಾಗುತ್ತದೆ.

'ಉಣ್ಣ ಉಂಟು ಉಡ ಉಂಡು' ಕಥೆಯಲ್ಲಿ ದುಷ್ಟ ವ್ಯಕ್ತಿತ್ವದ ಚಿತ್ರಣ ಕಂಡುಬರುತ್ತದೆ. ಸರ್ಕಾರಿ ನೌಕರಿಯಲ್ಲಿದ್ದ ಚಂದ್ರಯ್ಯನಿಗೆ ಎಲ್ಲವೂ ಇದ್ದು ವಿವೇಕ ಇರುವುದಿಲ್ಲ. ಸ್ನೇಹಿತನ ಸಹವಾಸದಿಂದ ಸ್ವೇಚ್ಛಾಚಾರಿಯಾಗುವ ಚಂದ್ರಯ್ಯ ಹೆಂಡತಿ ಮಕ್ಕಳನ್ನು ಕಡೆಗಣಿಸಿ, ಅವರ ಸಾವಿಗೆ ಕಾರಣನಾಗುತ್ತಾನೆ.

'ಮಾನ' ಕಥೆಯಲ್ಲಿನ ರುಕ್ಷಜ್ಜನಿಗೆ ಜೀವಮಾನವಿಡೀ ದುಡಿದಿದ್ದರೂ, ಅವನ ಮಾನ ಮುಚ್ಚುವಷ್ಟು ಬಟ್ಟೆಗೂ ಗತಿ ಇರುವುದಿಲ್ಲ. ಇಂತಹ ಸ್ಥಿತಿಯಲ್ಲಿ ಅವನಿಗೆ ಸರ್ಕಾರದ ಧನಸಹಾಯ ದೊರೆತು, ಆ ಹಣದಿಂದ ಬಟ್ಟೆ ತರಿಸಿದ್ದರೂ ಆತ ಅದನ್ನು ಹಾಕಿಕೊಳ್ಳುವಷ್ಟರಲ್ಲೇ ಪ್ರಾಣ ಕಳೆದುಕೊಳ್ಳುತ್ತಾನೆ. 'ಹಬ್ಬ ಮತ್ತು ಬಲಿ' ಈ ಸಂಕಲನದ ಕೊನೆಯ ಕತೆಯಾಗಿದ್ದು ಹಬ್ಬದ ನೆಪದಲ್ಲಿ ಸಾಲಗಾರನಾದ ಸಣ್ಣ ಕೊನೆಗೆ ನಿರ್ಗತಿಕನಾಗುವ ಆತನ ಚಿತ್ರಣವನ್ನು ಕಾಣಬಹುದು. ನಾಲ್ಕು ಜನರಂತೆ ತಾನೂ ಹಬ್ಬ ಮಾಡಬೇಕೆನ್ನುವ ಆಸೆ ಆತನಲ್ಲಿ ಇದ್ದರೂ, ಆತ ಹಣ ಇಲ್ಲದೆ ಅಸಹಾಯಕನಾಗುತ್ತಾನೆ. ಕೊನೆಗೆ ಸಾಲದ ಮೊರೆ ಹೋಗುತ್ತಾನೆ. ತಾನು ಜೀತಕ್ಕಿರುತ್ತೇನೆಂದು ಗೌಡನಿಂದ ಸಾಲ ತರುತ್ತಾನೆ. ಸಾಲ ಮಾಡಿಯಾದರೂ ಹಬ್ಬ ಆಚರಿಸಬೇಕೆಂಬ ಆತನ ಬಯಕೆ, ಅಲ್ಲದೆ ಆತನ ಸಂಸಾರದ ಅಧ್ಯಾತ್ಮದ ಚಿತ್ರಣದ

ಕುರಿತು ಇನ್ನೊಂದೆಡೆ ಗಮನಿಸಬಹುದು. ಹಬ್ಬಕ್ಕೆ ತಾನೂ ಕುರಿ ಬಲಿಕೊಡಬೇಕೆಂದು ತೀರ್ಮಾನಿಸಿ, ಸಾಲಕ್ಕೆಂದು ಹಣ ಪಡೆದು, ಬಲಿಗೆ ಕುರಿ ಹಾಗೂ ಹೊಸ ಬಟ್ಟೆಬರೆಯನ್ನೂ ತರುತ್ತಾನೆ. ಇಲ್ಲಿ ಶೋಷಿತ ವರ್ಗದ ನೋವನ್ನು ಈ ಕಥೆ ತೆರೆದಿಡುತ್ತದೆ.

'ಭಟ್ಟನ ಕನಸು' ಸಂಕಲನದಲ್ಲಿ ಹತ್ತು ಕಥೆಗಳಿವೆ. ಅದರಲ್ಲಿ ಮುಖ್ಯವಾಗಿ ಭಟ್ಟನ ಕನಸು ಕಥೆ ಹಾಸ್ಯಭರಿತವಾಗಿದೆ. ಮಹಾಜಿಪುಣನಾಗಿದ್ದ ಒಬ್ಬ ಶ್ರೀಮಂತ ತನ್ನ ಅಡಿಗೆಯವನನ್ನು ವಂಚಿಸಲು ಪ್ರಯತ್ನಿಸಿ, ತಾನೇ ಮೋಸಹೋಗುವುದನ್ನು ಚಿತ್ರಿಸಲಾಗಿದೆ. ಇದು ಮನುಷ್ಯನ ಸಣ್ಣತನವನ್ನು ಬಹಿರಂಗಗೊಳಿಸುವ ತಂತ್ರವಾಗಿ ಮೂಡಿಬಂದಿದೆ. ಬಿ.ಟಿ. ಲಲಿತಾ ನಾಯಕ್ ಅವರ "ಇದೇ ಕೂಗು ಮತ್ತೆ ಮತ್ತೆ" ಎಂಬ ಕವನ ಸಂಕಲನವು ಬಂಡಾಯ ಕ್ಷೇತ್ರದ ವಿವಿಧ ಮಜಲುಗಳನ್ನು ವಿವರಿಸುತ್ತದೆ. ಶೋಷಿತ ವರ್ಗದ ಶೋಷಣೆಯ ವಿರುದ್ಧದ ಧ್ವನಿ ಎದ್ದು ಕಾಣುತ್ತದೆ. ಬಡತನ, ಅಸಹಾಯಕತೆ, ಅಸಮಾನತೆ, ಸ್ತ್ರೀ ಶೋಷಣೆಯ ಹಾಗೂ ಧಾರ್ಮಿಕ ವಿಡಂಬನೆಯ ಚಿತ್ರಣವನ್ನು ತನ್ನ ಕಾವ್ಯದಲ್ಲಿ ವಿವರಿಸಿದ್ದಾರೆ.

ಬಿ.ಟಿ. ಲಲಿತಾ ನಾಯಕ್ ಅವರು ಸ್ತ್ರೀವಾದಿ ನೆಲೆಯಲ್ಲಿ ಸಾಹಿತ್ಯ ಸೃಷ್ಟಿಸಿದರೂ, ಅಂತಹ ಸೂಕ್ಷ್ಮ ಸಂದರ್ಭಗಳ ಚಿತ್ರಣವನ್ನು ವಿವರಿಸುವಾಗ ಬಹಳ ತಾಳ್ಮೆಯಿಂದ ಸಾಹಿತ್ಯ ರಚನೆ ಮಾಡುತ್ತಾರೆ. ಇವರ ಕೃತಿಯಲ್ಲಿನ ಸ್ತ್ರೀ ಪಾತ್ರಗಳು ಸ್ವತಂತ್ರವಾಗಿ ಹೋರಾಟಕ್ಕಿಳಿಯದೆ, ಪುರುಷರೊಂದಿಗೆ ಕೈಜೋಡಿಸುವ ಆರೋಗ್ಯಕರವಾದ ಲಕ್ಷಣವಾಗಿದೆ. ಅಂದರೆ ಹೆಣ್ಣಿನ ಅಸ್ತಿತ್ವವು ಗಂಡಿನ ಅಸ್ತಿತ್ವದಂತೆ ಆಗಬೇಕಾದರೆ ಪರಸ್ಪರ ಸಾಮರಸ್ಯ ಬೇಕು ಎನ್ನುವುದು ಇವರ ಧೋರಣೆಯಾಗಿದೆ. ಇಂತಹ ಧೋರಣೆ ಇನ್ನಿತರ ಮಹಿಳಾ ಲೇಖಕಿಯರಲ್ಲಿ ಗೋಚರಿಸುವುದು ಅಪರೂಪವೆಂದೇ ಹೇಳಬಹುದು. ಯಾಕೆಂದರೆ ಇಂತಹ ಸೂಕ್ಷ್ಮ ಅಂಶಗಳನ್ನು ತಮ್ಮ ಕೃತಿಗಳಲ್ಲಿ ತರುವಾಗ ಬೇರೆ ಲೇಖಕಿಯರು ಆವೇಶಕ್ಕೆ ಒಳಗಾಗುವುದನ್ನು ನೋಡಬಹುದು. ಆದರೆ ಲಲಿತಾ ನಾಯಕ್ ಅವರು ಇಂಥ ಸಂದರ್ಭಗಳಲ್ಲಿ ನಿರ್ಲಿಪ್ತತೆಯನ್ನು ಕಾಯ್ದುಕೊಳ್ಳುತ್ತಾರೆ. ಈ ಬಗೆಯ ವಸ್ತು ನಿಷ್ಠ ಧೋರಣೆಯುಳ್ಳ ಅವರ ಬರಹ ಮತ್ತು ಆಲೋಚನೆಗಳು ಮಹಿಳಾ ಹಾಗೂ ದಲಿತ ಸಂವೇದನೆಯ ಶೋಧನೆಯಲ್ಲಿ ತೊಡಗುವವರಿಗೆ ಅವಶ್ಯಕವಾಗಿ ಬೇಕಾಗುವ ಪೂರಕ ಸಾಮಗ್ರಿಗಳು ಆಗುತ್ತವೆ.

ಗೀತಾ ನಾಗಭೂಷಣರ ಸಣ್ಣಕಥೆಗಳು 'ಕ್ಯಾದಿಗಿ ಬನದಾಗ ಕತೆಯಾಗಿ ನಿಂತವರು' ಎಂಬ ಸಮಗ್ರ ಕಥಾಸಂಕಲನವಾಗಿ ಸಿವಿಜಿ ಪ್ರಕಾಶನದಿಂದ ಪ್ರಕಟವಾಗಿದೆ. ಅಲ್ಲಿ ಅರಳುವ ಕೇದಗೆಯ ಅಂಚಿನಲ್ಲೆಲ್ಲ ಚುಚ್ಚುವ ಮುಳ್ಳುಗಳು. ಸದಾ ಈ ಹಾವುಗಳು ಮುಳ್ಳುಗಳ ಭಯದ ನೆರಳಿನಲ್ಲೇ ಕೇದಗೆ ಅರಳಿ ನಳನಳಿಸುವಂತೆ ಅಸ್ಪೃಶ್ಯತೆ ಮತ್ತು ಶೋಷಣೆಯ ಕಲ್ಲುಮುಳ್ಳುಗಳಲ್ಲಿ ಜೀವನಯಾಪನೆ ಮಾಡುವ ಅಮಾಯಕ, ದುರ್ಬಲ, ಜನವರ್ಗದ ಬದುಕಿನ ನೋವು, ಸಂಕಟ, ದುಃಖ ದುಮ್ಮಾನಗಳಿಗೆ ಕನ್ನಡಿ ಹಿಡಿದ ಗೀತಾರವರು ಈ ಕೃತಿಯ ಬಗ್ಗೆ ಮಾತನಾಡುತ್ತ, 'ಕೆಳವರ್ಗದ ಮತ್ತು

ದಲಿತರನ್ನೊಳಗೊಂಡ ಇಡೀ ಶೂದ್ರ ಸಮುದಾಯಗಳ ಬದುಕಿನ ಅಸಲಿ ತುಣುಕುಗಳು ಇಲ್ಲಿ ಕತೆಯಾಗಿವೆ. ಇವುಗಳಲ್ಲಿ ನೋವಿದೆ, ಸಂಘರ್ಷವಿದೆ. ಕೆಲವೆಡೆ ರಾಜಿಯೂ ಇದೆ. ಅಂತೆಯೇ ಶೋಷಣೆಯ ಹಲವಾರು ಮಗ್ಗಲುಗಳ ಬೆತ್ತಲೆಯೂ ಇದೆ. ಕಪ್ಪು ಮಂದಿಯ ಬದುಕಿನ ಕತ್ತಲೆಯೂ ಇದೆ. ಉಳಿವಿಕೆಗಾಗಿ ನಡೆಸುವ ಬಡಿದಾಟದ ವಿವಿಧ ಸ್ತರಗಳ ಸಾಚಾತನವೆಲ್ಲ ಇಲ್ಲಿ ಕತೆಯ ಅಚ್ಚಿನಲ್ಲಿ ಆಕಾರ ತಳೆದು ನಿಂತಿವೆ ಎನ್ನಬಹುದು.'

ತಮ್ಮ ಕೊಳಚೆಗೇರಿಯ ಸಾವಿರಾರು ಹೆಣ್ಣುಮಕ್ಕಳ ಪ್ರತಿನಿಧಿಯಾಗಿ, ಧ್ವನಿಯಿಲ್ಲದವರಿಗೆ ಧ್ವನಿಯಾಗುತ್ತಾ, ವಿಚಾರವಂತರಿಗೆ ಬೆಂಬಲ ನೀಡುತ್ತಾ ಲೇಖನಿ ಮುಂದುವರೆಸಿದರು. ದಲಿತ ಬಂಡಾಯ ಚಳುವಳಿ, ಬಸವಣ್ಣ, ಅಂಬೇಡ್ಕರ್ ವಿಚಾರಧಾರೆಗಳು ಸಾಣೆ ಹಿಡಿದ ಖಡ್ಗದಂತೆ ಅವರ ಲೇಖನಿಗೆ ಶಕ್ತಿ, ಸತ್ವವನ್ನು ನೀಡಿದವು. ಮನಸ್ಸಿನಾಳದ ನೋವು, ದ್ವೇಷ, ಸಿಟ್ಟು, ರೋಷಗಳು ಬಿರಿದ ಅಣೆಕಟ್ಟಿನಿಂದ ಚಿಮ್ಮುವ ನೀರಧಾರೆಯಂತೆ, 'ನೆಲದಿಂದುಕ್ಕುವ ಲಾವಾರಸದಂತೆ' ಚಿಮ್ಮಿ ಹರಿಯತೊಡಗಿದವು. ವೈಯಕ್ತಿಕ ನೋವುಗಳ ಜತೆಯಲ್ಲಿ ಕೊಳೆಗೇರಿಯ ಅನ್ಯಾಯ, ಶೋಷಣೆ, ಹಾದರ, ಕಳ್ಳತನ, ಜಗಳ, ಬಡಿದಾಟ, ಮುಗ್ಧತೆ, ಮೌಢ್ಯ, ಪುರುಷ ಪ್ರಧಾನ ಹುಳುಕು, ಹುನ್ನಾರ... ಹೀಗೆ ಹಲವು ಅಂಶಗಳನ್ನು ತನ್ನ ಬರವಣಿಗೆಯ ಮೂಲಕ ಹೊರತಂದರು.

'ಬದುಕು ನುಂಗುವ ಮಂದಿ' ಕಥೆಯಲ್ಲಿ ತಮ್ಮ ಸೀಮಿತ ಬಯಕೆಗಳನ್ನೂ ಪೂರೈಸಲಾಗದ ಕೆಳವರ್ಗದ ಜನರ ಬಡತನ, ಅಸಹಾಯಕತೆ, ಶ್ರೀಮಂತರ ದರ್ಪ, ದೌಲತ್ತುಗಳು, ಧರ್ಮರಕ್ಷಣೆಯ ಪರಿಧಿಯಲ್ಲೇ ಸೆರಗು ಹಾಸುವ ಅಧರ್ಮ, ಅತ್ಯಾಚಾರಗಳು – ಇತ್ಯಾದಿಗಳ ಮೂಲಕ ಕತೆಗಾರ್ತಿ ಸಮಾಜದ ಕ್ರೌರ್ಯ ಮತ್ತು ಸ್ವಾರ್ಥವನ್ನು ಬಯಲಿಗೆಳೆಯುತ್ತಾರೆ.

'ದಾಳ' ಕಥೆಯಲ್ಲಿ ನ್ಯಾಯದ ಹಾದಿಯಲ್ಲಿ ಹೆಜ್ಜೆಯಿಟ್ಟ, ಉತ್ತಮ ಗುಣಗಳಿದ್ದ ಮಹಿಳೆಯೊಬ್ಬಳು ಸಮಾಜದ ಶ್ರೀಮಂತ ಜಮೀನ್ದಾರರ ರಾಜಕೀಯ ಸ್ವಾರ್ಥಸಾಧನೆಗೆ ದಾಳವಾಗುವುದನ್ನು ಚಿತ್ರಿಸಿ, ಸಮಾಜದಲ್ಲಿ ಹೆಣ್ಣುಮಕ್ಕಳ ಯಶಸ್ಸಿನ ಹಾದಿ ಎಷ್ಟು ದುರ್ಗಮವೆಂಬುದನ್ನು ಕಥೆ ಸಾಬೀತುಗೊಳಿಸುತ್ತದೆ.

'ಮೂಡಿ ಬರ್ತಾನ ಚಂದ್ರಮಾ ನೋಡ್ಯ' – ಈ ಕಥೆಯಲ್ಲಿ ಗಂಗೆ ತನಗಾದ ಮಗುವನ್ನು ನೋಡಿ ತನ್ನ ಗಂಡ ಬೆಳ್ಳಾಯನಲ್ಲಿ "ಚಂದ್ರಮಾ ಮೂಡಿ ಬರ್ಲಿಕ್ಹತ್ತಿಯಾನ..." ಅನ್ನುತ್ತಾಳೆ. ಇಲ್ಲಿ ತನ್ನ ಮಗುವನ್ನೇ ಭಗವಂತನಿಗೆ ಹೋಲಿಸುತ್ತಾ, ಭಗವಂತನೇ ಚಂದ್ರಮನ ರೂಪದಲ್ಲಿ ಬರುತ್ತಿದ್ದಾನೆ ಎನ್ನುವಳು. ಅಲ್ಲದೆ ಈ ಕಥೆಯಲ್ಲಿ ಅನಾಥನಾದ ಬೆಳ್ಳಾಯನ ಉದಾರತೆಯು ಕಂಡುಬರುತ್ತದೆ. ಬಂಗಲೆಯಲ್ಲಿ ವಾಸಿಸುವ ಶ್ರೀಮಂತರೆದುರು ಬೆಳ್ಳಾಯನ ಪರೋಪಕಾರಿ ಮನೋಭಾವ, ಅನುಕಂಪ, ಹೃದಯವಂತಿಕೆ, ಸಜ್ಜನಿಕೆ ಬಹಳ ಮೆಚ್ಚುವಂತದ್ದೇ ಆಗಿದೆ.

'ಈ ಲೋಕವೆಲ್ಲ ಘೋರ' ಅನ್ನುವ ಕಥೆಯಲ್ಲಿ ಬಡವನ ಆಸೆ ಚೂರು ಚೂರಾದ ಚಿತ್ರಣ ಕಂಡುಬರುತ್ತದೆ. ಬಡತನ, ದಾರಿದ್ರ್ಯಕ್ಕೆ ಒಳಗಾದ ಬಡವರ ಬದುಕು ಎಷ್ಟು ಯಾತನೀಯ ಎಂಬ ಅಂಶವನ್ನು ಲೇಖಕಿ ಶಾಣಪ್ಪ, ನಾನ್ಯಾ, ಲವಂಗಿ ಪಾತ್ರದ ಮೂಲಕ ತೆರೆದಿಡುತ್ತಾರೆ.

'ಮಾನಪಮಾನ ನಿಮ್ಮದಯ್ಯ' – ಈ ಕಥೆಯಲ್ಲಿ ಸಮಾಜದ ಜನರ ಮನಸ್ಸು ಪರಿವರ್ತನೆ ಆಗದೆ ಸಮಾಜದಲ್ಲಿ ಸಮಾನತೆ ಬರುವುದಿಲ್ಲ. ಬಡವರಿಗೆ ಸಮಾನತೆ ಎಲ್ಲಿದೆ ಎಂಬ ಪ್ರಶ್ನೆ ಈ ಕಥೆಯಿಂದ ಮೂಡಿಬರುತ್ತದೆ. ಯಾಜಮಾನ್ಯದ ನೆಲೆಗಳು ಸಾವ್ಕಾರನ ವರ್ತನೆಯಿಂದ ಕಂಡುಬರುತ್ತದೆ. ಅನ್ಯಜಾತಿಯ ವಿವಾಹವು ತಾಯಿಯನ್ನು ಬಲಿತೆಗೆದುಕೊಂಡಿತು. ಇದು ಎಂತಹ ಅನಾಹುತಕ್ಕೆ ಕಾರಣವಾಗುತ್ತದೆ ಎಂಬುದನ್ನು ಈ ಕಥೆಯಲ್ಲಿ ನೋಡಬಹುದು. ಬಸವಣ್ಣನ ಚಿಂತನೆ, ಅಂತರ್ ಜಾತೀಯ ಮದುವೆ ಈ ಕಥೆಯಲ್ಲಿ ನೋಡಬಹುದು. ಆ ಮೂಲಕ ಸಮಾಜದ ಪರಿವರ್ತನೆಯನ್ನು ಕಾಣಬಹುದು.

'ಮಠದಯ್ಯ ಮತ್ತು ಧರ್ಮ' – ಈ ಕಥೆಯಲ್ಲಿ ಧರ್ಮದ ಹೆಸರಿನಲ್ಲಿ ಅಧರ್ಮಕ್ಕೆ ಮಣೆ ಹಾಕುವ ಮಠಾಧಿಪತಿಗಳ ವಿಡಂಬನೆ ಇಲ್ಲಿದೆ. ಧರ್ಮವನ್ನು ತನಗೆ ಬೇಕಾದಂತೆ ಬಳಸುವ ಮಠಾಧಿಪತಿಗಳ ಸ್ವಾರ್ಥ ಎದ್ದು ಕಾಣುತ್ತದೆ. ಮರಿಸ್ವಾಮಿ ಧರ್ಮರಕ್ಷಕನಾಗಿ ಜನರಿಗೆ ವಂಚಿಸುತ್ತಾನೆ.

'ಬಂಡು' ಕಥೆ ಸ್ತ್ರೀ ಶಕ್ತಿಯನ್ನು ಬಿಂಬಿಸುವ ಕಥೆ. ಸಾಹುಕಾರನಿಂದ ಮೋಸ ಹೋದ ಲವಂಗಿ ಆತನು ಮಾಡಿದ ಗಾಂಜಾ ಕೆಲಸವನ್ನು ಪೋಲೀಸರಿಗೆ ತಿಳಿಸಿ ಆತನಿಗೆ ಶಿಕ್ಷೆ ಕೊಡಿಸುತ್ತಾಳೆ. ಆ ಮೂಲಕ ತನ್ನಲ್ಲಿ ಹುದುಗಿದ್ದ ದ್ವೇಷವನ್ನು ಹೊರಹಾಕುವುದರ ಮೂಲಕ ತನ್ನ ಮಗನಿಗೆ ವಿದ್ಯಾಭ್ಯಾಸ ಕೊಡಿಸುತ್ತಾಳೆ. ಇಲ್ಲಿ ಪ್ರಾಮಾಣಿಕತೆ ಅನ್ನುವುದು ಆಧ್ಯಾತ್ಮದ ಪ್ರತೀಕವಾಗಿ ಮೂಡಿಬಂದಿದೆ.

'ಮಠದವ್ವ' ಕಥೆ ನಂಬಿಕೆ ಮತ್ತು ವಾಸ್ತವಗಳು ಮುಖಾಮುಖಿಯಾಗುವ ಕಥೆಯಾಗಿದೆ. ಅನಾಥಳಾದ ಶಾಣಮ್ಮನನ್ನು ಊರಿನ ಸಮುದಾಯ ಮಠದವ್ವ ಎಂದು ನೋಡುವ ಚಿತ್ರಣ ವಿಶೇಷವಾದುದು. ಊರಿನ ಜನ ಅವಳನ್ನೇ ದೇವರೆಂದು ನಂಬುವ ಪ್ರಸಂಗ ವಿಚಿತ್ರವಾದುದು. ಜನರ ಆಧ್ಯಾತ್ಮದ ಕುರಿತ ಚಿಂತನೆ ಇಲ್ಲಿ ಭಿನ್ನವಾಗಿದೆ. ಶಾಣಮ್ಮ ತನ್ನ ಹಸಿವಿಗಾಗಿ ಬದುಕು ನಡೆಸುತ್ತಿದ್ದರೆ, ಊರಿನ ಜನ ಮಠ ಸ್ಥಾಪಿಸಿ ಭಜನೆ, ಸಂಕೀರ್ತನೆ ಮಾಡುವ ಪ್ರಸಂಗ ಒಂದು ರೀತಿಯಲ್ಲಿ ಭಿನ್ನತೆಯನ್ನು ಪ್ರಕಟಿಸುತ್ತದೆ.

'ಕಮರಿಹೋಗುವ ಕೆಳಜನರು' ಕಥೆಯಲ್ಲಿ ಮೇಲುಜಾತಿಯವರ ಸೂತ್ರದ ಬೊಂಬೆಯಾಗಿ ಪ್ರಾಣತೆರುವ ಅಮಾಯಕ ಬಡಜನರ ಬದುಕಿನ ಕಹಿ ವಾಸ್ತವವನ್ನು ಅತ್ಯಂತ ಹೃದಯವೇಧಕವಾಗಿ ಚಿತ್ರಿಸುವ ಈ ಕತೆ 'ಭಾಳ ತಲೆಗೋಳದಿಂದ ಇದು ಹೀಗೇ ಬೆಳ್ದು ಬಂದಾದ ಮಗಾ ದೊಡ್ಡವರ ತಪ್ಪಿಗಿ ಸಣ್ಣವರ ತೆಲಿದಂಡಾ...'. ಇಲ್ಲಿ

ಅಮಾಯಕರನ್ನು, ನಿರಪರಾಧಿಯನ್ನು ಬಲಿತೆಗೆದುಕೊಂಡ ಗೌಡನು ಯಾಜಮಾನ್ಯದ ದರ್ಪವನ್ನು ಪ್ರದರ್ಶಿಸುವುದು ನೋಡಬಹುದು.

'ಗೂಡಿನೊಳಗಿನ ಗುಟ್ಟು' ಕಥೆಯಲ್ಲಿ ಮಠದ ಅಧಿಪತಿಯಾದ ಮಾದೇವಯ್ಯ ಮಾಡುವ ಅನೈತಿಕ ಚಟುವಟಿಕೆಗಳು ಮತ್ತು ಆತನ ಪತ್ನಿ ಸಾಂತಮ್ಮಳ ದೌರ್ಬಲ್ಯ, ದುಷ್ಟತನದ ಕೆಲಸ ಜಾತಿಯ ನೀತಿಯನ್ನು ಅತಿಕ್ರಮಿಸಿ ಮನುಷ್ಯನನ್ನು ಅನೈತಿಕ ಚಟುವಟಿಕೆಗಳಿಗೆ ತಳ್ಳುವುದನ್ನು ಕಾಣಬಹುದು. ಮುಖವಾಡದ ಬದುಕನ್ನು ನಡೆಸುವ ಮಠಾಧಿಪತಿಗಳು ಮಾಡುವ ಕೃತ್ಯಗಳು ಈ ಕಥೆಯಲ್ಲಿ ವಿಭಿನ್ನವಾಗಿ ಮೂಡಿಬಂದಿವೆ. ಇದು ಸಮಾಜದ ಜನರು ಗೌರವಿಸುವ ಸಂಸ್ಕಾರವಂತ ಮನೆತನಕ್ಕೆ ಒಂದು ದೊಡ್ಡ ಸವಾಲಾಗಿದೆ.

'ಗರ್ಭ' – ಈ ಕಥೆಯಲ್ಲಿ ತಳಸಮುದಾಯದ ಹೆಣ್ಣನ್ನು ಶಿವಪುರದ ಈಸೂರಪ್ಪನ ಮಡದಿ ಗೌರಮ್ಮ ತನ್ನ ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಾಳೆ. ತನಗೆ ಮಗುವಾಗದಾಗ ತಮ್ಮ ಮನೆಯಲ್ಲಿರುವ ಕೆಲಸದಾಕೆ ಮೂಲಕ ತನ್ನ ಗಂಡನನ್ನು ಒಪ್ಪಿಸಿ ಮಗು ಪಡೆಯಲು ಉಪಾಯ ಹೂಡುತ್ತಾಳೆ. ಇಲ್ಲಿ ದಲಿತ ಸಮುದಾಯದ ಹೆಣ್ಣು ಅನುಭವಿಸುವ ಶೋಷಣೆಯ ಮುಖ ನೋಡಬಹುದು. ಅಲ್ಲದೆ ಮೇಲ್ವರ್ಗದವರು ತಳಸಮುದಾಯದ ಸ್ತ್ರೀಯನ್ನು ಬಳಸಿಕೊಳ್ಳುವ ವಿಧಾನವನ್ನು ನೋಡಬಹುದು. ಆದರೆ ಮಗು ತಾಯಿಯಾದ ಚಿಕ್ಕಿ ಕೊನೆಗೆ ತನ್ನ ಮಗುವನ್ನು ಎತ್ತಿಕೊಂಡು ಬೇರೆ ರೈಲು ಹತ್ತುವುದರ ಮೂಲಕ ಗೀತಾರವರು ಕರುಳಿನ ಸಂಬಂಧವನ್ನು ವಿವರಿಸುತ್ತಾರೆ.

'ದುರಂತ' – ಈ ಕಥೆಯಲ್ಲಿ ಮತಾಂತರ ಮತ್ತು ಮತಾಂತರಗೊಂಡವರ ಮನಸ್ಸಿನ ಬೇಗುದಿಗಳನ್ನು ಬಹು ಸೂಕ್ಷ್ಮವಾಗಿಯೂ ಹೃದಯಸ್ಪರ್ಶಿಯಾಗಿಯೂ ಅನಾವರಣಗೊಳಿಸುವ ಕಥೆ ಇದಾಗಿದೆ. ಗಂಗಾನಗರದ ಜೋಪಡಿಪಟ್ಟಿಯ ಮಾದೇವಿ ಆಕಸ್ಮಿಕವಾಗಿ ತೀರಿಹೋದಾಗ ಇಡೀ ಕೇರಿಗೆ ಕೇರಿಯೇ ಸಂಕಟಪಡುತ್ತದೆ. ಹೆಣದ ಅಂತಿಮ ದರ್ಶನವನ್ನು ಮಾಡಲು ಬಂದ ಸಲೀಂನ ಬೇಡಿಕೆಗೆ ಕೇರಿ ಜನಗಳು ಸುಮ್ಮನಾಗುತ್ತಾರೆ ಅಲ್ಲದೆ ಕಿವುಡಾಗುತ್ತಾರೆ.

'ಪುಂಡಿ ಪೂಜಾರಿಯಾದಾಗ' – ಈ ಕಥೆಯಲ್ಲಿ ಬದಲಾದ ಸಾಮಾಜಿಕ ಚಿತ್ರಣವನ್ನು ನೋಡಬಹುದು. ದಲಿತ ಸಮುದಾಯದ ಪುಂಡಿ ದೇವಾಲಯದಲ್ಲಿ ಅರ್ಚಕನಾಗುವುದರ ಮೂಲಕ ಬದಲಾದ ದಲಿತರ ಸ್ಥಾನಮಾನದ ಸ್ಥಿತಿಯನ್ನು ನೋಡಬಹುದಾಗಿದೆ. ಪುಂಡಿಯ ಸಂಬಂಧಿಕರು ಹಾಗೂ ಮಡದಿ ಪುಂಡಿ ಅರ್ಚಕನಾಗುವುದನ್ನು ನಿರಾಕರಿಸಿದರೂ ಪುಂಡಿ ತಾನು ಸರಕಾರದಿಂದ ನೇಮಕ ಆಗಿದ್ದಾನೆಂದು ತಿಳಿದು ಕೈ ಜೋಡಿಸುತ್ತಾನೆ. ಮರಗವ್ವನ ಗುಡಿಯ ಪೂಜಾರಿಯಾಗಿದ್ದ ಪುಂಡಿ ಲಕ್ಷ್ಮೀ ಗುಡಿಯ ಪೂಜಾರಿಯಾಗುತ್ತಾನೆ.

ಶತಶತಮಾನಗಳಿಂದ ಭಾರತೀಯ ಸಮಾಜದಲ್ಲಿ ಬೇರೂರಿದ್ದ ಅಸಮಾನತೆಯ

ವ್ಯವಸ್ಥೆಯನ್ನು ಪರಿವರ್ತಿಸಬೇಕಾದ ಅಗತ್ಯವನ್ನೂ ಹಾಗೆ ಪರಿವರ್ತಿಸುವಾಗ ಎದುರಿಸಬೇಕಾಗುವ ಸಮಸ್ಯೆಗಳನ್ನೂ ಈ ಕತೆ ಅತ್ಯಂತ ಮಾರ್ಮಿಕವಾಗಿ ನಿರೂಪಿಸಿದೆ. ಸೀನಾಪ್ಪಾಚಾರಿಯ ರೋಷವನ್ನು ವರ್ಣಿಸಿದ ರೀತಿ ಅದ್ಭುತವಾಗಿದ್ದು ಕತೆಗಾರ್ತಿಯ ವರ್ಣನೀಯ ಕೌಶಲಕ್ಕೆ ಸಾಕ್ಷಿಯಾಗುತ್ತದೆ.

'ಬಂದ್' ಕತೆಯಲ್ಲಿ ಬೇಲೂ ಎಂಬ ಬಾಲಕ ತನ್ನ ತಂದೆಯ ಸಾವಿನ ನಂತರ ಮನೆಯ ಎಲ್ಲಾ ಜವಾಬ್ದಾರಿಯನ್ನು ನೋಡಿಕೊಳ್ಳುತ್ತಾನೆ. ತಾಯಿಯ ಶುಶ್ರೂಷೆಗಾಗಿ ಸಾಕಷ್ಟು ಹಣ ಖರ್ಚು ಮಾಡುತ್ತಾನೆ. ಆದರೆ ಆತ ಅಸಹಾಯಕರ ರಕ್ಷಣೆಗೆ ಧಾವಿಸಿ ರಸ್ತೆಯಲ್ಲಿ ಗುಂಡಿಗೆ ಬಲಿಯಾಗಿ ಹೆಣವಾಗುತ್ತಾನೆ. ಯಾರದೋ ದ್ವೇಷಕ್ಕೆ, ಯಾರದೋ ಸೇಡಿಗೆ, ಸಿಟ್ಟಿಗೆ ಮುಗ್ಧ ಅಮಾಯಕ ಜನರ ಸಾವು, ನೋವು ಆಗುವುದನ್ನು ನೋಡಬಹುದು. ಗಂಡನೂ ಇಲ್ಲದೆ, ಇದ್ದೊಬ್ಬ ಮಗನಲ್ಲೇ ಜೀವವಿಟ್ಟುಕೊಂಡಿದ್ದ ಮಲಕವ್ವನ ನೋವು ನಷ್ಟಗಳಿಗೆ ಪರಿಹಾರವೆಲ್ಲಿದೆ? ಅವಳ ಒದ್ದಾಟ, ಕಣ್ಣೀರುಗಳಿಗೆ ತಾವೂ ಒಂದಷ್ಟು ಸೇರುತ್ತ ಜೋಪಡಿಗಳ ಜನರು ಸರಿದು ಹೋಗುತ್ತಾರೆ.

80ರ ದಶಕದ ನಂತರ ಸಾಹಿತ್ಯ ರಚಿಸಿದ ಗೀತಾರವರು ಶೋಷಣೆಯ ವಿರುದ್ಧ ದಂಗೆಯ ಬರವಣಿಗೆಯನ್ನು ಆರಂಭಿಸಿದರು. ಜೋಗಿಣಿಯರ ಜೀವನದ ನಿಯಮಗಳು ಅತಿನಿಷ್ಠುರ. ಜೋಗಿಣಿ, ತಲೆಮೇಲೆ ದೇವಿಪರಡಿ ಎಂಬ ಅಗಲವಾದ ಬುಟ್ಟಿಹೊತ್ತು, ಕೊರಳಿನಲ್ಲಿ ಕವಡೆಸರ, ಬೆಳ್ಳಿಯ ಪದಕಗಳನ್ನು ಧರಿಸಿ, ಬಗಲಲ್ಲಿ ಚೌಡಕಿ ಹಿಡಿದು ಬಾರಿಸುತ್ತ ಊರೂರು, ಗಲ್ಲಿಗಲ್ಲಿ ಸುತ್ತುತ್ತಾ, ಹಾಡುತ್ತಾ ಭಿಕ್ಷೆ ಬೇಡಬೇಕು. ರಾತ್ರಿಯಾದರೆ ತನ್ನನ್ನು ಬಯಸಿದ ಗಂಡಸಿಗೆ ಸೆರಗು ಹಾಸಬೇಕು. ಒಮ್ಮೆ ಜೋಗಿಣಿಯಾದವಳು, ಯಾವುದೇ ಕಾರಣಕ್ಕೂ ಮತ್ತೆ ಮದುವೆಯಾಗುವಂತಿಲ್ಲ. ಮದುವೆ ಮಾಡಿಕೊಳ್ಳುವ ಗಂಡುಗಳು ಸಿಗಬೇಕಲ್ಲ. ಅವಳಿಗೆ ಹುಟ್ಟುವ ಮಕ್ಕಳಿಗೆ ತಂದೆಯ ಹೆಸರು ತಿಳಿದಿರುವುದೂ ಇಲ್ಲ, ಹೆಸರು ಸಿಗುವುದೂ ಇಲ್ಲ. ಜೋಗಿಣಿಯರು ಸೇಂದಿ ದುಕಾನುಗಳಲ್ಲಿ ತಾವೂ ಕುಡಿದು, ಬೀಡಿ ಸೇದಿ, ಅಲ್ಲಿ ಬರುವ ಗಂಡಸರ ಕಾಮತೃಷೆ ತೀರಿಸುವ ಸಾಧನವಾಗಿ ಬದುಕುತ್ತಾರೆ. ಧೈರ್ಯವಿದ್ದವರು ಆತ್ಮಹತ್ಯೆಗೆ ಶರಣಾಗುತ್ತಾರೆ. ಇಲ್ಲದಿದ್ದಲ್ಲಿ, ನೂರು ರೋಗಗಳ ಬೀಡಾಗಿ, ನಿರ್ಗತಿಕರಾಗಿ, ಬೀದಿಯ ಹೆಣವಾಗುತ್ತಾರೆ.

ಗೀತಾರವರ ಅನುಭವಗಳ ವಿಶಾಲತೆಯನ್ನು ದರ್ಶಿಸುವ ಕಥಾ ಪಾತ್ರಗಳ ಬಗ್ಗೆ ಸಹೃದಯರನ್ನು ಕಾಡುವ ಒಂದು ಪ್ರಶ್ನೆಯಿದೆ. ಒಂದು ಪಾತ್ರದ ಗುಣರೂಪ ವರ್ಣನೆ ಆ ಪಾತ್ರದ ನಡವಳಿಕೆಗಳೊಂದಿಗೆ ಸಾವಯವಗೊಳ್ಳಬೇಕಾದುದು ಕಥಾಶಿಲ್ಪದ ದೃಷ್ಟಿಯಿಂದ ಅಗತ್ಯವಾಗುತ್ತದೆ. ಆದರೆ ಇಲ್ಲಿನ ಕೆಲವು ಮಹಿಳಾ ಪಾತ್ರಗಳು ತಮ್ಮ ಗುಣ, ರೂಪ, ನಡೆ, ನುಡಿಗಳಲ್ಲಿ ಅನನ್ಯರಾಗಿ ವರ್ಣಿತರಾಗಿದ್ದರೂ ಕಾದಂಬರಿಯ ವೇದಿಕೆಯಲ್ಲಿ ಆ ಅನನ್ಯತೆಯನ್ನು ಕಾಪಾಡಿಕೊಳ್ಳುವುದಿಲ್ಲ. ಅವರ ಆದರ್ಶ, ಆವೇಶಗಳು ಪಾತ್ರಗಳ ಒಳಗಿನ ಜೀವದ್ರವ್ಯವಾಗದೆ ಹೊರಗಿನಿಂದ ಆರೋಪಿಸುವ

ಮೌಲ್ಯವಾಗಿ ಮಾತ್ರ ನಿಂತುಬಿಡುತ್ತದೆ. ಕೆಲವು ಪಾತ್ರಗಳು ಹದಿ ಹರೆಯದಲ್ಲಿ ಜೀವನೋತ್ಸಾಹ ಮತ್ತು ಜೀವನ ಪ್ರೀತಿಗಳನ್ನು ಮೊಗಮೊಗೆದು ಅನುಭವಿಸಿದರೂ ಮಧ್ಯವಯಸ್ಸು ದಾಟುವುದರೊಳಗೆ ಎಲ್ಲವನ್ನೂ ಕಳಕೊಂಡು ನಿರ್ಜೀವವಾಗುತ್ತದೆ. ಬದುಕಿನ ಕಹಿ ಅನುಭವಗಳು ಅವರನ್ನು ಅಷ್ಟೊಂದು ಹಣ್ಣು ಮಾಡಿದರೂ ಅವರೊಳಗಿನ ಅದಮ್ಯವಾದ ವಿಷಯಲಾಲಸೆ ಅಚ್ಚರಿ ಹುಟ್ಟಿಸುತ್ತದೆ. ನಿಮ್ಮ ಬದುಕಿನ ಮೌಢ್ಯಾಚರಣೆ ಹಾಗೂ ಲಿಂಗ ಸಮಸ್ಯೆಯ ಬಗ್ಗೆ ಇನ್ನಿಲ್ಲದಷ್ಟು ಚಿಂತನೆಯ ಕ್ಷಕಿರಣಗಳನ್ನು ಹರಿಯಿಸಿದ ಗೀತಾರವರು ಶೋಷಿತಲೋಕದ ಇತರ ಆಯಾಮಗಳ ಬಗ್ಗೆಯೂ ತಮ್ಮ ಆಯುಧವನ್ನು ಹರಿತಗೊಳಿಸಬಹುದಿತ್ತು ಎನಿಸುತ್ತದೆ.

ಎಂ.ಕೆ. ಇಂದಿರಾರವರ 'ಫಣಿಯಮ್ಮ' ಕಾದಂಬರಿ ಒಂದು ಆಧುನಿಕತೆಯ ಪ್ರತೀಕವಾಗಿ ಮೂಡಿಬಂದಿದೆ. ಬ್ರಾಹ್ಮಣ ವಿಧವೆ ಆದರೂ ಮಡಿ ಅಂತ ಆರಂಭದಲ್ಲಿ ಇದ್ದರೂ ನಂತರ ಆಕೆ ನೂರಾರು ಸ್ತ್ರೀಯರಿಗೆ ಹೆರಿಗೆ ಮಾಡಿಸುತ್ತಾಳೆ. ಹೀಗೆ ಜಾತಿ ವ್ಯವಸ್ಥೆಯನ್ನು ಮುರಿಯುವಲ್ಲಿ ಯಶಸ್ವಿ ಆಗುತ್ತಾಳೆ. ಎಷ್ಟೋ ಹೆಣ್ಣು ಮಕ್ಕಳಿಗೆ ಜೀವ ನೀಡಿದ ಜೀವದಾನಿಯಾಗಿ ಮೂಡಿಬರುತ್ತಾಳೆ. ಈಕೆ ಪರಂಪರೆಯನ್ನು ಒಡೆಯುವ ಕೆಲಸ ಮಾಡುತ್ತಾಳೆ.

'ಕುಸುಮಬಾಲೆ'ಯಲ್ಲಿ ಬರುವ ಹೆಣ್ಣು ಸಮಾಜದ ನಿರ್ದೇಶನವನ್ನು ಪಾಲಿಸುತ್ತಾಳೆ. ಬೇಂದ್ರೆಯವರ 'ಪುಟ್ಟ ವಿಧವೆ' ಕವನ – ಚಿಕ್ಕವಯಸ್ಸಿನಲ್ಲಿ ವಿಧವೆ, ಕೇಶಮುಂಡನ, ಮದುವೆಗೆ ಹೋಗದಂತೆ ಮಾಡುವುದು – ಇಲ್ಲಿ ಹೆಣ್ಣಿನ ಶೋಷಣೆಯ ಬೇರೆ ಬೇರೆ ಮುಖಗಳನ್ನು ನೋಡಬಹುದು.

ಒಂದು ಸ್ಥಾಪಿತವಾದ ಸಮಾಜದಲ್ಲಿದ್ದು ಬಾಳೀ ಬದುಕುವ ಹೆಣ್ಣಿನ ಚಿತ್ರಣಗಳು ಮೊಗಳ್ಳಿ ಗಣೇಶರವರ ಕಥಾಸಾಹಿತ್ಯದಲ್ಲಿ ಕಂಡುಬರುತ್ತದೆ. 'ಒಂದು ಹಳೆಚಡ್ಡಿ', 'ಭೂಮಿ ಬುಗುರಿ', 'ಅಲ್ಲಿ ಆ ಅಳು ಈಗಲೂ' ಮೊದಲಾದ ಅನೇಕ ಕಥೆಗಳು ಅದನ್ನೇ ಬಿಂಬಿಸುತ್ತವೆ. ಆದರೆ ಕೆಲವೊಂದು ಕತೆಗಳು ಬದಲಾದ ವ್ಯವಸ್ಥೆಯನ್ನೂ ಚಿತ್ರಿಸುತ್ತ ಸಾಗುತ್ತವೆ. ಒಟ್ಟು ಕಥೆಗಳಲ್ಲಿ ಬರುವ ಹೆಣ್ಣಿನ ಚಿತ್ರಣವನ್ನು ಪರಿಶೀಲಿಸುವುದು ಮುಖ್ಯ ಉದ್ದೇಶವಾಗಿದೆ. ಬೇರೆ ಬೇರೆ ಕಥೆ, ಕಾದಂಬರಿ, ನಾಟಕಗಳೊಂದಿಗೆ ಸಮೀಕರಿಸಿದಾಗ ಮೊಗಳ್ಳಿ ಗಣೇಶರವರ ಕಥೆಗಳಲ್ಲಿ ಬರುವ ಹೆಣ್ಣಿನ ಚಿತ್ರಣ ಸ್ಥಾಪಿತವಾದ ಸಮಾಜದ ಪಾತ್ರಗಳೇ ಆಗಿ ಕೆಲವು ಮೂಡಿಬಂದರೆ ಕೆಲವು ಪಾತ್ರಗಳು ಬದಲಾದ, ಕಾಲಘಟ್ಟಕ್ಕೆ ತಕ್ಕಂತೆ ಪರಿವರ್ತಿತವಾದ ಪಾತ್ರಗಳೂ ಕಂಡುಬರುತ್ತವೆ.

ಮೊಗಳ್ಳಿ ಗಣೇಶರವರ ''ನಾದದನದಿ' ಕಥೆಯಲ್ಲಿ – ಗೀಜುಗನ ಜೀವನದಲ್ಲಿ ವಾರಿಜ ಇಲ್ಲದ ಜೀವನ ಇಲ್ಲ ಎಂದು ಚಿತ್ರಿಸುತ್ತಾರೆ. ಹೆಣ್ಣಿಲ್ಲದ ನನ್ನ ಬದುಕು ದುಃಖತಪ್ತ, ವ್ಯರ್ಥ, ನೀರಸ... ಎಂದು ಗೀಜುಗನಿಗೆ ಅನಿಸುತ್ತದೆ. ಇದು ಬದಲಾದ ಸಾಮಾಜಿಕ ಸ್ಥಿತಿ ಎಂದರೆ ತಪ್ಪಾಗಲಾರದು.

ಮ.ನ. ಜವರಯ್ಯನವರ 'ಮಾಗಿ' ಕಾದಂಬರಿ ದಲಿತ ಮಹಿಳೆಯೊಬ್ಬಳ

ಉತ್ಕಟ ಬದುಕಿನ ಅನಾವರಣವಾಗಿದೆ. ಬದುಕಿಗೆ ಬೆನ್ನು ಹಾಕದೇ ಛಲದಿಂದ ಹೋರಾಡುವ ಜೀವನೋತ್ಸಾಹದೊಂದಿಗೆ ದಲಿತೀಯತೆಯ ಅನುಭವಗಳನ್ನು ಕಟ್ಟಿಕೊಡುತ್ತದೆ. ಇಲ್ಲಿ ಸ್ತ್ರೀಯ ಅಂತಃಸತ್ವವನ್ನು ಪ್ರಧಾನವಾಗಿಟ್ಟುಕೊಂಡರೂ ಕೌಟುಂಬಿಕ ಬದುಕಿನ ಪಾಲನಶಕ್ತಿಯೂ ಪ್ರತಿನಿಧಿತವಾಗಿದೆ. ಇದರೊಂದಿಗೆ ಗಂಡ ಕೊಡುವ ಕಿರುಕುಳ, ಅತ್ತೆ ನಾದಿನಿಯರು ಸಾಧಿಸುವ ವೈರ, ಭಾವ–ಮೈದುನರ ಹಿಂಸೆ, ಈ ಎಲ್ಲಾ ಕಲಹದ ನಡುವೆ ಆಕೆ ಯಶಸ್ವೀ ಹೆಣ್ಣಾಗಿ ಮೂಡಿಬಂದಿದ್ದಾಳೆ. ದಲಿತ ಹೆಣ್ಣಿನ ಯಶಸ್ವೀ ಬದುಕನ್ನು ಇಲ್ಲಿ ನೋಡಬಹುದು.

ಕೊಡಗಿನ ಗೌರಮ್ಮರ 'ವಾಣಿಯ ಸಮಸ್ಯೆ', ಸಾರಾರವರ 'ಸಹನಾ', ತ್ರಿವೇಣಿಯವರ 'ಅಪಸ್ವರ–ಅಪಜಯ', ಕಾರಂತರ 'ಅಜ್ಜಿ...' ಹೀಗೆ ಅನೇಕ ಕೃತಿಗಳು ಸಂಪ್ರದಾಯಸ್ಥ ಸಮಾಜವನ್ನು ಪ್ರಶ್ನಿಸಿ ಹೊಸ ಸಮಾಜವನ್ನು ಕಟ್ಟುವಲ್ಲಿ ಮುಂದಾಗುತ್ತವೆ.

ಈವರೆಗಿನ ವಿವೇಚನೆಯ ಪರಿಣಾಮವಾಗಿ ಇಷ್ಟು ಹೇಳಬಹುದು: ಪುರುಷ ನಿರ್ಮಿತ ವ್ಯವಸ್ಥೆಯಲ್ಲಿ ರೂಪು ತಳೆದ ಕನ್ನಡ ಸಾಹಿತ್ಯದಲ್ಲಿ ಕೇವಲ ಪುರುಷರ ಅಧೀನದ ವಸ್ತುಗಳಾಗಿ ರೂಪು ಪಡೆದ ಸ್ತ್ರೀಯರು ಸ್ವತಂತ್ರ ವ್ಯಕ್ತಿತ್ವಗಳ ಕ್ರಿಯಾಶೀಲತೆಯನ್ನು ಸೂಚಿಸುವಂತಹದ್ದು ಮಾನವತಾವಾದದ ಆವಿಷ್ಕಾರದೊಂದಿಗೆ ಊಳಿಗಮಾನ್ಯದಿಂದ ಬಂಡವಾಳ ಶಾಹಿಯೆಡೆಗೆ, ರಾಜಸತ್ತೆಯಿಂದ ಪ್ರಜಾಸತ್ತೆಯ ಕಡೆಗೆ ಬದಲಾಗತೊಡಗಿದ ಸಮಾಜದ ಸ್ಥಿತಿಗಳಿಗೆ ಸ್ಪಂದಿಸುತ್ತಾ ಬರುತ್ತಿರುವ ಲೇಖಕರ ಸ್ತ್ರೀಪರ ಧೋರಣೆಗಳಲ್ಲಿ ಕಂಡುಬರುವ ವ್ಯತ್ಯಾಸಕ್ಕೂ ಸಾಮಾಜಿಕ ಬದಲಾಗುತ್ತಿರುವ ಸ್ತ್ರೀ ವ್ಯಕ್ತಿತ್ವದ ಆಯಾಮಗಳಿಗೂ ಪರೋಕ್ಷ ಸಂಬಂಧವಿದೆ.

ಒಟ್ಟಿನಲ್ಲಿ ಬಿ.ಟಿ. ಲಲಿತಾ ನಾಯಕ್ ಮತ್ತು ಗೀತಾ ನಾಗಭೂಷಣರವರ ಕಥೆ, ಕಾದಂಬರಿಗಳ ಮೂಲಕ ಕನ್ನಡ ಸಾರಸ್ವತ ಲೋಕಕ್ಕೆ ಶಿಷ್ಟಸಮಾಜ ಅಸಹ್ಯ ಪಡುತ್ತಿದ್ದ ಲೋಕವೊಂದರ ಅತಿ ಸೂಕ್ಷ್ಮವಾದ ನೋವಿನ ನೆಲೆಗಳನ್ನು ಆರ್ತತೆಗಳನ್ನೂ ಆಪ್ತವಾಗಿಯೂ ರೋಮಾಂಚನಕಾರಿಯಾಗಿಯೂ ದರ್ಶನ ಮಾಡಿಸಿದ್ದಾರೆ. ದಲಿತ ಸಂವೇದನೆ ಹಾಗೂ ಮಹಿಳಾ ಶೋಷಣೆಗೆ ಸಂಬಂಧಿಸಿದಂತೆ ಈ ಬಹುಮುಖೀ ಸಂಸ್ಕೃತಿಯ ಸಮಾಜ ಅಪೇಕ್ಷಿಸಬಹುದಾದ ಸುಧಾರಣೆಯ ಹೊಸ ಶೋಧವನ್ನು ನಡೆಸಿದ್ದಾರೆ. ಹತಾಶೆಯ ಕತ್ತಲಲ್ಲಿ ಆಸೆ, ಭರವಸೆಗಳ ಬೆಳಕನ್ನು ತುಂಬಿದ್ದಾರೆ. ಕನ್ನಡ ಸಾಹಿತ್ಯ ಚರಿತ್ರೆಯ ದಲಿತ ಪ್ರಜ್ಞೆ ಹಾಗೂ ಸ್ತ್ರೀವಾದಿ ಪರಂಪರೆಯ ಹಾದಿಯಲ್ಲಿ ಮೈಲಿಗಲ್ಲುಗಳಾಗಿ ದಾಖಲಾಗಬಲ್ಲ ಮಹತ್ವದ ಕಾಣಿಕೆಗಳನ್ನು ನೀಡಿದ್ದಾರೆ.

**ಫಲಿತಗಳು:**

ಒಟ್ಟಿನಲ್ಲಿ ಬಿ.ಟಿ. ಲಲಿತಾ ನಾಯಕ್ ಮತ್ತು ಗೀತಾ ನಾಗಭೂಷಣರವರ ಕಥಾ ಸಾಹಿತ್ಯದಲ್ಲಿ ಸಾಮಾಜಿಕ ಚಿಂತನೆ ಬಗ್ಗೆ ಹೀಗೆ ಗ್ರಹಿಸಬಹುದು:

1. ತಳ ಸಮುದಾಯದ ಸಾಮಾಜಿಕ ಚಿತ್ರಣ, ಮನಸ್ಸಿನ ದುಃಖ, ಹತಾಶೆ, ನೋವು,

ತಾಕಲಾಟ ಮತ್ತು ಮನೆಯ ಒಡೆಯನಿಂದ ಶಿಕ್ಷೆಗೆ ಗುರಿಯಾಗುವಿಕೆ, ಹೆಣ್ಣನ್ನು ಪುರುಷ ಪ್ರಧಾನ ಸಮಾಜ ನೋಡುವ ರೀತಿ ಕಥೆಗಳಲ್ಲಿ ವ್ಯಕ್ತವಾಗುತ್ತವೆ.

2. ಪ್ರಸ್ತುತ ಸಮಾಜದಲ್ಲಿ ಸಮಾಜದ ಶ್ರೀಮಂತ ಜಮೀನ್ದಾರರ ರಾಜಕೀಯ ಸ್ವಾರ್ಥಸಾಧನೆಗೆ ದಾಳವಾಗುವ ಚಿತ್ರಣ.
3. ಹೊಸ ಸಾಮಾಜಿಕ ವ್ಯವಸ್ಥೆಯು ಗಂಡನಿಗೆ ನೆರವು ನೀಡಲು ಹೆಣ್ಣು ಕೂಡಾ ದುಡಿಯುವಿಕೆ, ಆದರೆ ಸಾಮಾಜಿಕ ಚೌಕಟ್ಟಿನ ನೆಲೆಯಲ್ಲೇ ಮುಂದುವರೆಯುವುದು, ಕೊನೆಗೂ ಆಕೆಯ ಅಸ್ಮಿತೆಯಿರುವುದು ಸಾಂಸಾರಿಕ ಜೀವನ ತೂಗಿಸುವ ಜಾಣ್ಮೆಯಲ್ಲಿ ಮಾತ್ರ ಎಂದು ವ್ಯಕ್ತವಾಗುತ್ತದೆ.
4. ಮತಾಂತರ ಮತ್ತು ಮತಾಂತರಗೊಂಡವರ ಮನಸ್ಸಿನ ಬೇಗುದಿಗಳನ್ನು ವಿವರಿಸುವ ಚಿತ್ರಣ, ಧರ್ಮದ ಚಿತ್ರಣ.
5. ಮುಖ್ಯವಾಹಿನಿಯಲ್ಲಿ ಕಾಣಿಸದ ತಳಸ್ತರದ ಹೆಣ್ಣುಮಕ್ಕಳಿಗೆ ಮೇಲ್ಜಾತಿ ವರ್ಗದವರಿಂದ ವಿವಿಧ ಮುಖಗಳ ಶೋಷಣೆಯಿಂದ ತನ್ನ ಅಸ್ತಿತ್ವವನ್ನು ಕಾಯ್ದುಕೊಳ್ಳುವಲ್ಲಿ ವಿಫಲವಾಗುವುದು.
6. ಮುಖ್ಯವಾಹಿನಿಯ ಕಥಾಸಾಹಿತ್ಯದಲ್ಲಿ ಚಿತ್ರಿತವಾಗುವ ಮಹಿಳೆಯರಿಗಿಂತ ಈ ಕಥನದಲ್ಲಿ ಚಿತ್ರಿತವಾಗಿರುವ ಮಹಿಳೆಯರ ಲೋಕ ಹೇಗೆ ಭಿನ್ನ ಎಂದು ಗುರುತಿಸಬಹುದು.
7. ಮೇಲ್‌ಸ್ತರದ ಸಮುದಾಯದವರಿಂದ ಮೇಲ್‌ಜಾತಿ ಹೆಣ್ಣುಮಗಳು ಶೋಷಣೆಗೊಳಗಾಗಿದ್ದರಿಂದ ತನ್ನ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವ ಅಂಶ ವ್ಯಕ್ತವಾಗುತ್ತದೆ.
8. ಬಡವನ ಆಸೆ ಚೂರು ಚೂರಾದ ಚಿತ್ರಣ ಹಾಗೂ ಬಡತನ, ದಾರಿದ್ರ್ಯಕ್ಕೆ ಒಳಗಾದ ಬಡವರ ಬದುಕು ಎಷ್ಟು ಯಾತನೀಯ ಎಂಬ ಅಂಶವನ್ನು ಒಳಗೊಂಡಂತೆ ಹಲವಾರು ಸಾಮಾಜಿಕ ಸಂಬಂಧಗಳನ್ನು ವಿವರಿಸುತ್ತಾರೆ.

**ಪರಾಮರ್ಶನ ಗ್ರಂಥಗಳು:**

1. ಲಲಿತಾ ನಾಯಕ್ ಬಿ.ಟಿ., (1991), ಹಬ್ಬ ಮತ್ತು ಬಲಿ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.
2. ಗಾಯತ್ರಿ ನಾವಡ, (2000), ಭಾರತೀಯ ಸ್ತ್ರೀವಾದ: ಒಂದು ಸಂಕಥನ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
3. ಫಣಿರಾಜ್ ಕೆ., (2011), ಆಂಟೋನಿಯೋ ಗ್ರಾಮ್ಷಿ, ಬೆಂಗಳೂರು: ಅಭಿನವ ಪ್ರಕಾಶನ.
4. ಮೊಗಳ್ಳಿ ಗಣೇಶ್, (2006), ದಲಿತ ಕಥನ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
5. ಸುಧಾ ಸೀತಾರಾಮನ್, (2010), ಮಹಿಳಾ ಅಧ್ಯಯನ: ಸಮಾಜ ಶಾಸ್ತ್ರೀಯ ದೃಷ್ಟಿಕೋನ, ಬೆಂಗಳೂರು: ಸ್ತ್ರೀಲೇಖ ಪ್ರಕಾಶನ.
6. ರವಿ ನಾಯಕ್ ಎಂ., (2009), ಬಿ.ಟಿ. ಲಲಿತಾ ನಾಯಕ್‌ರವರ ಕಾವ್ಯದ ವೈಶಿಷ್ಟ್ಯಗಳು, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.
7. ಅರವಿಂದ ಮಾಲಗತ್ತಿ (ಸಂ), (2002), ದಲಿತ ಮಾರ್ಗ, ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ.
8. ಮೊಗಳ್ಳಿ ಗಣೇಶ್, (2005), ಅವ್ಯಕ್ತ ಚರಿತ್ರೆ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
9. ಪ್ರಮೀಳಾ ಮಾಧವ್, (2016), ಗೀತಾ ನಾಗಭೂಷಣ, ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.